# ನಿಷ್ಠೆಯೆಂಬ ಮನೆಯೊಳು ಹತ್ತಾರು ಬೇಲಿಗಳು



ಕಾವ್ಯಾ ಕಡಮೆ

ಮನೆಯ ಜಗಳಕ್ಕೆ ನೆರೆಯವನು ಪರಿಹಾರ ಕೊಡಲು ಪ್ರಯತ್ನಿಸಿದಾಗ ಮನೆಯವರೆಲ್ಲ ಒಂದಾದಂತೆ ಎಂದು ಅಂದುಕೊಳ್ಳುತ್ತಾನೆ ಇಲ್ಲಿನ ಕಥಾನಾಯಕ ಅನಂತಕೃಷ್ಣ ಬಂಗಾರಕೇರಿ. ಶಿವಮೊಗ್ಗಾದಲ್ಲಿ ಬೆಳೆದು, ಡಾಕ್ಟರಿಕೆ ಕಲಿತು ತನ್ನ ಬದುಕಿನ ಬಹುಪಾಲು ಸಮಯವನ್ನು ಅಮೆರಿಕದಲ್ಲಿಯೇ ಕಳೆದ ಅವನು, ತನ್ನ ತಂದೆಯ ಕಡೆಯಿಂದ ಮಾಧ್ವ; ತಾಯಿಯ ಕಡೆಯಿಂದ ಸ್ಮಾರ್ತ. ಇವನ ಹೆಂಡತಿ ನರ್ಮದಾಳೂ ಸ್ಮಾರ್ತಳೇ. ತನ್ನ ಬಾಯ್‌ಫ್ರೆಂಡ್ ಕೆವಿನ್‌ನೊಂದಿಗೆ ಮದುವೆಗೆ ತಯಾರಾಗಿ ನಿಂತಿರುವ ಮಗಳು ಅಕ್ಷರಾ ಮಾತ್ರ ಬ್ರಾಹ್ಮಣಿಕೆಯ ಓನಾಮವನ್ನೂ ಕಲಿಯದೇ ಬೆಳೆದವಳು. ಸಾಂಪ್ರದಾಯಿಕ ಮಾರ್ಮನ್ ತಂದೆ-ತಾಯಿಯೊಟ್ಟಿಗೆ ಬೆಳೆದ ಆಕೆಯ ಬಾಯ್‌ಫ್ರೆಂಡ್ ಕೆವಿನ್ ಕೂಡ ಒಂದು ರೀತಿ ಅಕ್ಷರಾಳ ತರಹವೇ ಬೆಳೆದವನು. ಅಮೆರಿಕವೆಂಬ 'ಮೆಲ್ಟಿಂಗ್ ಪಾಟ್' ಇವರಿಬ್ಬರ ನೆತ್ತಿಯ ಮೇಲೂ ತನ್ನ ಅಮೆರಿಕತನದ ಎರಕ ಹೊಯ್ದಿದೆ. ಇನ್ನೊಂದರ್ಥದಲ್ಲಿ 'ಬ್ಯಾಪ್ಟೈಸ್' ಮಾಡಿದೆ. ಆ ಮೂಲಕ ಎರಡೂ ಜೋಡಿ ತಂದೆ-ತಾಯಿಯರು ಅನುಭವಿಸುವ ಧರ್ಮಸಂಕಷ್ಟಗಳಿಂದ ಇವರನ್ನು ಬಿಡುಗಡೆಗೊಳಿಸಿದೆ.

'ಸತ್ಕುಲಪ್ರಸೂತರು' ಕಾದಂಬರಿ ಶುರುವಾಗುವುದೇ ಅನಂತಕೃಷ್ಣ ಬಂಗಾರಕೇರಿ ಎದುರಿಸುವ ಇಂಥ ಒಂದು ಧರ್ಮಸಂಕಟದಿಂದ, ಗೋಕುಲಾಷ್ಟಮಿಯ ಪೂಜೆಯಂದು ಊರಿಂದ ಕರೆ ಮಾಡಿದ ದೊಡ್ಡಪ್ಪನಿಂದ ಮನೆಯಲ್ಲಿ ಮಗಳ ಬಾಯ್‌ಫ್ರೆಂಡಿನ ಇರುವನ್ನು ಮುಚ್ಚಿಡುವ ಒದ್ದಾಟದಿಂದ. ಚಿಕ್ಕಂದಿನಲ್ಲಿ ತನ್ನ ತಾಯಿ ರುಕ್ಮಿಣಿ ಮಾಧ್ವರ ಮನೆಗೆ ವಿವಾಹವಾಗಿ ಬಂದ ಏಕೈಕ ಸ್ಮಾರ್ತ ಸೊಸೆಯಾಗಿ ಪಟ್ಟ ಕಷ್ಟಗಳನ್ನೆಲ್ಲ ಕಂಡು ಬೆಳೆದ ಅನಂತ, ಅಮೆರಿಕಕ್ಕೆ ಬಂದು ನೆಲೆನಿಂತ ಇಷ್ಟು ವರ್ಷಗಳಲ್ಲಿ, ನನ್ನ ಆಲೋಚನೆಗಳಲ್ಲಿ ನನ್ನ ಸ್ವಂತದ್ದೆಷ್ಟು? ನನ್ನ ಅಪ್ಪ, ಅಮ್ಮಂದಿರದೆಷ್ಟು? ನನ್ನ ಕುಟುಂಬದ್ದೆಷ್ಟು, ನನ್ನ ಧರ್ಮದ್ದೆಷ್ಟು... ಎಂದು ಪ್ರಶ್ನಿಸಿಕೊಳ್ಳುವಷ್ಟು; ಮಗಳ ಸಹಪಾಠಿಗಳು ಬಂದಾಗ ಮನೆಗೆ ಪೆಪ್ಪರೋನಿ ಪಿಜ್ಜಾ ತರಿಸುವಷ್ಟು, ಸಿಂಗಲ್ ಮಾಲ್ಟ್ ವಿಸ್ಕಿಯನ್ನು ಸಂಜೆಯ ವಿರಾಮಕ್ಕೆ ಬಿಟ್ಟುಕೊಳ್ಳುವಷ್ಟು 'ಓಪನ್ ಅಪ್' ಆಗಿದ್ದಾನೆ. ಅವನ ಈ ಪರಕೀಯತೆ ಅವನಿಗೆ ವರವೂ ಹೌದು. ತೇಜಸ್ವಿಯವರು ಒಂದು ಕಡೆ, 'ಯಾವುದನ್ನಾದರೂ ಪರೀಕ್ಷೆಗೆ ಒಳಪಡಿಸಬೇಕು ಅಂತಿದ್ದರೆ, ಅದನ್ನು ಒಂದು ಅತಿಗೆ ಕೊಂಡೊಯ್ಯಬೇಕು' ಎನ್ನುತ್ತಾರೆ. ಮಗಳು ಅಕ್ಷರಾಳ ಮದುವೆಯ ಸಂದರ್ಭ ಅನಂತನ ನಂಬಿಕೆಗಳನ್ನೂ, ಅವನು ಬೆಳೆದ ಮತದ ಸಂಪ್ರದಾಯಗಳ ಕುರಿತು ಅವನ ನಿಷ್ಠೆಯನ್ನೂ ಪರೀಕ್ಷಿಸುವ ಅಂಥ ಒಂದು ಅತಿಗೆ ತಂದು ನಿಲ್ಲಿಸಿದೆ. ಈ ಅಗ್ನಿದಿವ್ಯವನ್ನು ಹಾಯ್ದು ಮುಗಿದಾಗ ಎಷ್ಟು ಜನ ಗಾಯವಾಗದೇ ಉಳಿಯುತ್ತಾರೆ, ಯಾರು ಸೋಲುತ್ತಾರೆ, ಯಾರು ಪಾದದ ತುಂಬ ಬೊಬ್ಬೆಗಳೆದ್ದರೂ ಬದುಕಿ ಬರುತ್ತಾರೆ ಎಂಬುದೇ ಕತೆಯ ಸಾರ.